ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಪೂರ.

<u>ಸಿ.ಸಿ. ನಂಃ **1842/2022**</u>

ಫಿರ್ಯಾಧಿಕಾರಃ ಕರ್ನಾಟಕ ಸರ್ಕಾರದ ಪರವಾಗಿ ಶಹಾಪೂರ ಪೊಲೀಸಠಾಣೆ

// ವಿರುದ್ಧ //

ಆರೋಪಿ ಃ ರಾಘವೇಂದ್ರ.

<u>ದೋಷಾರೋಪಣೆ</u>

ನಾನು ಶ್ರೀಮತಿ. ಶೋಭಾ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು, ಶಹಾಪೂರ.

ಆರೋಪಿ.

ರಾಘವೇಂದ್ರ ತಂದೆ ಭೂಪತಿ ಮದಿಪುಡಿ, ವಯಸ್ಸುಃ **30** ವರ್ಷ, ಉದ್ಯೋಗಃ ಒಕ್ಕಲುತನ, ಸಾಃ ದೇವದುರ್ಗ ಕ್ರಾಸ ಹತ್ತಿರ ಹತನೂರ ಕ್ಯಾಂಪ.

ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ಮೊದಲನೆದಾಗಿ ದಿನಾಂಕಃ **04.05.2022** ರಂದು **08.15** ಪಿ.ಎಂ. ಕ್ಕೆ ಶಹಾಪೂರ ಪೊಲೀಸಠಾಣಾ ವ್ಯಾಪ್ತಿಯಲ್ಲಿ ಬರುವ ಹತ್ತಿಗುಡೂರ ಕ್ರಾಸ್ ಹತ್ತಿರ ಇರುವ ಹತನೂರ ಕ್ಯಾಂಪಿನಲ್ಲಿ ಚಾಸಾ-**1** ಹಾಗೂ ಚಾಸಾ-**4** ರವರು ತಮ್ಮ ಮನೆಯ ಮುಂದೆ ಮಾತನಾಡುತ್ತಾ ನಿಂತಾಗ ಆರೋಪಿಯಾದ ನೀನು ಚಾಸಾ-**1** ರವರ ಮನೆಯ ಮುಂದೆ ಬಂದವನೇ ಚಾಸಾ-**4** ರವರನ್ನು ಉದ್ದೇಶಿಸಿ ನಳದ ನೀರಿನ ಸಂಬಂಧವಾಗಿ ಅವಾಚ್ಯ ಶಬ್ದಗಳಿಂದ ಬೈದಿದ್ದು, ನಂತರ ಚಾಸಾ-**1** ರವರಿಗೆ ಕೈಯಿಂದ ಬಲಗೈ ಮೊಳಕೈಗೆ ಹಾಗೂ ತಲೆಗೆ ಹೊಡೆದಿದ್ದು. ಈ ಮೂಲಕ ಭಾ.ದಂ.ಸಂ. ಕಲಂ. **323** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಯಾದ ನೀನು ಚಾಸಾ-**1** ರವರಿಗೆ ನನಗೆ ಎದುರು ಮಾತನಾಡುತ್ತೀಯಾ ಮಗನೆ ಅಂತ ಬೈಯುತ್ತಾ ಅಲ್ಲೇ ಬಿದ್ದ ಬಡಿಗೆಯಿಂದ ಚಾಸಾ-**4**

ರವರಿಗೆ ತಲೆಗೆ ಹೊಡೆದು ರಕ್ತಗಾಯ ಹಾಗೂ ಅದೇ ಬಡಿಗೆಯಿಂದ ಹೆಬ್ಬೆರಳು ಹಾಗೂ ತೋರು ಬೆರಳಿನ ಮದ್ಯ ಹೊಡೆದು ರಕ್ತಗಾಯ ಮಾಡಿದ್ದು. ಈ ಮೂಲಕ ನೀನು ಭಾ.ದಂ.ಸಂ. ಕಲಂ 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯ ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಯಾದ ನೀನು ಚಾಸಾ-1 ರವರಿಗೆ ಕೈಯಿಂದ ಬಲಗೈ ಮೊಳಕೈಗೆ ಹಾಗೂ ತಲೆಗೆ ಹೊಡೆದು ಕೂದಲು ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿದ್ದು. ಈ ಮೂಲಕ ಭಾ.ದಂ.ಸಂ. ಕಲಂ. 354 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಯಾದ ನೀನು ಚಾಸಾ-1 ರವರ ಮನೆಯ ಮುಂದೆ ಬಂದವನೇ ಚಾಸಾ-4 ರವರನ್ನು ಉದ್ದೇಶಿಸಿ ಲೇ ಶೀನ್ಯಾ ಸೂಳಿ ಮಗನೇ ನಳದ ನೀರಿನ ಸಂಬಂಧವಾಗಿ ನಮ್ಮೊಂದಿಗೆ ಜಗಳಾ ಮಾಡುತ್ತೀಯಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು. ಈ ಮೂಲಕ ಭಾ.ದಂ.ಸಂ. ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಐದನೇದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಯಾದ ನೀನು ಚಾಸಾ-1 ಮತ್ತು ಚಾಸಾ-4 ರವರನ್ನು ಉದ್ದೇಶಿಸಿ ಇನ್ನೊಮ್ಮೆ ನನ್ನ ತಂಟೆಗೆ ಬಂದರೆ ನಿಮ್ಮ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಭಯ ಹಾಕಿದ್ದು ಈ ಮೂಲಕ ಭಾ.ದಂ.ಸಂ. ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮತ್ತು ನಾನು ಈ ಮೇಲ್ಕಂಡ ಆರೋಪಗಳಿಗೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸುತ್ತೇನೆ.

**ಪ್ರಶ್ನೆ-1ಃ ಮೇಲೆ ಓದಿ ಹೇಳಿದ ಆಪಾದನೆ/ದೋಷಾರೋಪಣೆ ತಿಳಿಯಿತೆ ಅಥವಾ ಅರ್ಥವಾಯಿತೇ?**

**ಆರೋಪಿಯ ಉತ್ತರಃ**

**ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?**

**ಆರೋಪಿಯ ಉತ್ತರಃ**

**(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)**

**ದಿನಾಂಕಃ 16-01-2023**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಶಹಾಪೂರ**

**ಆರೋಪಿತರ ಸಹಿ**